# ಪಾತ್ರವೇ ನಟನನ್ನು ಹುಡುಕಿಕೊಳ್ಳುತ್ತೆ

◆ ತೆಲುಗು ಕಿರುತೆರೆಗೆ ಮೊದಲ ಪರಿಚಯ ಹೇಗೆ ಆಯಿತು?

ಸ್ನೇಹಿತರೊಬ್ಬರು ಪರಿಚಯಿಸಿದರು. ತೆಲುಗಿನಲ್ಲಿ ನಟನೆಯನ್ನು ಆರಂಭಿಸಿದೆ. ಅಲ್ಲಿ ಮೂರು ಧಾರಾವಾಹಿ ಮಾಡುವಂತೆ ಆಯಿತು. ಆ ವೇಳೆಗಾಗಲೇ ಕನ್ನಡದಲ್ಲಿ ಅವಕಾಶಗಳು ಬಂದವು. ಬಿಡುವು ಇರಲಿಲ್ಲ ಎಂದು ಈ ಕಡೆ ಬರಲು ಸಾಧ್ಯ ಆಗಲಿಲ್ಲ. ಮೊದಲು ಇಲ್ಲಿ ಸಾಕಷ್ಟು ಹುಡುಕಾಟ ಮಾಡಿದ್ದೆ. ಆಗ ನನಗೆ ಅವಕಾಶ ಸಿಕ್ಕಿರಲಿಲ್ಲ. ತೆಲುಗು ಕಿರುತೆರೆಯಲ್ಲಿ ಕಾಣಿಸಿಕೊಂಡ ನಂತರ, ಕನ್ನಡದಲ್ಲಿ ಮಾಡಲೇಬೇಕು ಎನ್ನುವ ಆಸೆ ಇನ್ನೂ ಹೆಚ್ಚಾಯಿತು. ಅಪ್ಪ–ಅಮ್ಮ ತೆಲುಗು ಅರಿಯದಿದ್ದರೂ ನನ್ನ ಧಾರಾವಾಹಿಗಳನ್ನು ನೋಡುತ್ತಿದ್ದರು. ಅವರ ಖುಷಿಗೆ ಕನ್ನಡಕ್ಕೆ ಬರಲೇ ಬೇಕು ಎನ್ನುವ ಒತ್ತಡ ಸದಾ ಕಾಡುತ್ತಿತ್ತು.

◆ ಆರಂಭದಲ್ಲಿ ಕಥೆಯಲ್ಲಿ ಸ್ಪಿರಿಟ್ ಇತ್ತು. ವೇಗವೂ ಇತ್ತು, ಕ್ರಮೇಣ ನಿಧಾನವಾಯಿತು. ಅದು ನಿಮಗೆ ಹೇಗೆನಿಸಿದೆ?

ನಿಧಾನ ಆಗಲಿಲ್ಲ, ಅದು ಅನಿವಾರ್ಯವಾಗಿತ್ತು. ಕೋರ್ಟ್ ವ್ಯಾಜ್ಯದ ಆಚೆ ಪಾತ್ರಗಳ ಖಾಸಗಿ ಬದುಕಿನ ಚಿತ್ರವೂ ಬೇಕು. ನಮ್ಮ ಲವ್‌ಸ್ಟೋರಿ ಕೂಡ ಅಗತ್ಯ ಇತ್ತು. ಅದರ ಜೊತೆಗೆ ಮದುವೆಯ ಸಂಭ್ರಮವೂ ಕಥೆಯ ಭಾಗ ಆಗಿದ್ದರಿಂದ ಆ ಕಡೆಯೂ ಕಥೆ ಕವಲೊಡೆಯಿತು. ಮತ್ತೆ ಕೋರ್ಟ್ ಸನ್ನಿವೇಶ ಮುಂದುವರಿಯುತ್ತದೆ. ಸಾಮಾನ್ಯವಾಗಿ ಕೋರ್ಟ್ ಪ್ರಕರಣಗಳೂ ಹಾಗೆಯೇ ನಡೆಯುತ್ತಿರುತ್ತವೆ. ಎಷ್ಟೋ ಕೇಸ್ ದೊಡ್ಡ ಸದ್ದು ಮಾಡುತ್ತವೆ. ಸ್ವಲ್ಪ ದಿನ ತಣ್ಣಗಾಗುತ್ತವೆ. ದೀರ್ಘಕಾಲದ ಪ್ರಯಾಣ ಅದಕ್ಕಿರುತ್ತದೆ. ಒಂದೇ ಕೇಸ್ ಇಟ್ಟುಕೊಂಡು ಎಳೆಯುತ್ತಿದ್ದಾರೆ ಎಂದು ಜನ ಭಾವಿಸುವ ಸಾಧ್ಯತೆ ಇದೆ. ಅದನ್ನು ತಪ್ಪಿಸುವುದು ಕೂಡ ಮುಖ್ಯ. ವಾಸ್ತವದಲ್ಲಿ ಯಾವುದೇ ಒಂದು ಪ್ರಕರಣ ಹಾಗೆಯೇ ಇರುತ್ತದೆ. ಅದಕ್ಕೆ ಹತ್ತಾರು ಆಯಾಮಗಳು ಇರುತ್ತವೆ ಎನ್ನುವುದೂ ಅಷ್ಟೇ ಸತ್ಯ. ನಮ್ಮ ಧಾರಾವಾಹಿ ವಾಸ್ತವಕ್ಕೆ ಹತ್ತಿರವಾಗಿದೆ ಎಂದೇ ಅನ್ನಿಸುತ್ತದೆ. ಭಾರ್ಗವಿಯ ಖಾಸಗಿ ಜೀವನವೂ ಇದ್ದರೆ ರಸವತ್ತಾಗಿರುತ್ತದೆ. ಅವರು ಮನೆಯಲ್ಲಿ ಹೇಗಿರುತ್ತಾರೆ ಎನ್ನುವುದೂ ವೀಕ್ಷಕರ ಕುತೂಹಲ. ಬರೀ ಕೇಸ್ ಕೋರ್ಟ್ ಅಂದರೆ ಬೋರ್ ಅನ್ನಿಸಲು ಶುರುವಾಗಬಹುದು.



**ಮನೋಜ್ ಕುಮಾರ್**
ಕಲರ್ಸ್ ಕನ್ನಡದ 'ಭಾರ್ಗವಿ ಎಲ್‌ಎಲ್‌ಬಿ'ಯ ಅರ್ಜುನ್

◆ ಅಭಿನಯಿಸಬೇಕು ಎನ್ನುವ ಬಯಕೆ ಹುಟ್ಟಿದ್ದು ಹೇಗೆ?

ನಟನೆ ಮಾಡುತ್ತೇನೆ ಎನ್ನುವುದು ಗೊತ್ತಿರಲಿಲ್ಲ. ಮೂಲತಃ ದಕ್ಷಿಣ ಕನ್ನಡದ ಸುಳ್ಯ ನನ್ನ ಊರು. ಬಿ. ಫಾರ್ಮ ಮುಗಿದ ನಂತರ ಕೆಲಸವನ್ನು ಹುಡುಕಿಕೊಂಡು ಬೆಂಗಳೂರಿಗೆ ಬಂದೆ. ಆಗ ಮಾಡೆಲಿಂಗ್ ಆಡಿಷನ್ ವಿಷಯ ಗೊತ್ತಾಯಿತು. ಭಾಗವಹಿಸಿ, ಅದರಲ್ಲಿ ಆಯ್ಕೆ ಆದೆ. ಅದರ ಮುಂದಿನ ಹಂತ ನಟನೆಯನ್ನೇ ಮಾಡಬೇಕು ಎಂದು ಅನ್ನಿಸಿತು. ಜೊತೆಗೆ ಔಷಧ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡಲು ಆಸಕ್ತಿಯೂ ಇರಲಿಲ್ಲ. ನಾವು ಮಾಡುವ ಕೆಲಸವನ್ನು ಇಷ್ಟಪಟ್ಟು ಮಾಡಬೇಕು. ನನ್ನ ಗಮನವೆಲ್ಲ ಸಿನಿಮಾ ಕಡೆ ಇತ್ತು. ಅಲ್ಲೇ ಏನಾದರೂ ಮಾಡಬೇಕು ಎಂದುಕೊಂಡಿದ್ದೇನೆ. ನಟನೇ ಆಗಬೇಕು ಎನ್ನುವುದು ಯೋಜಿತ ನಿರ್ಧಾರ ಅಲ್ಲ. ಒಂದು ಪ್ರಾಜೆಕ್ಟ್ ಆದ ಮೇಲೆ ಜನ ಇಷ್ಟಪಡಲು ಶುರುಮಾಡಿದರು. ನನಗೊಂದು ಐಡೆಂಟಿಟಿ ಕಿರುತೆರೆಯಲ್ಲಿ ಸಿಕ್ಕಿದೆ. ಜನ ನನ್ನನ್ನು ಸ್ವೀಕರಿಸಿದ್ದಾರೆ ಎನ್ನುವುದು, ಮತ್ತೆ ಒಂದಲ್ಲ ಒಂದು ಪಾತ್ರವನ್ನು ಮಾಡಬೇಕು ಎನ್ನುವ ಹುಮ್ಮಸ್ಸನ್ನು ಹುಟ್ಟಿಸಿದೆ. ಭೇಟಿಯಾದ ಜನ ನಿಮ್ಮ ಫ್ಯಾನ್ ಅನ್ನುವುದು, ನಿಮ್ಮ ಸೀರಿಯಲ್ ನೋಡುತ್ತೇನೆ ಎಂದು ಮಾತನಾಡುವುದು. ನಾನು ಬೇರೆ ಕಡೆ ನೋಡದಂತೆ ಮಾಡಿತು. ಕಳೆದ ನಾಲ್ಕು ತಿಂಗಳ ಹಿಂದಷ್ಟೆ ಕನ್ನಡ ಟೀವಿಗೆ ಪರಿಚಯ ಆಗಿದ್ದೇನೆ. ಈಗಾಗಲೇ ತುಂಬ ರೀಚ್ ಆಗಿದ್ದೇನೆ.

◆ ಒಬ್ಬ ಕನ್ನಡ ಹುಡುಗನ ತೆಲುಗು ನಾಡಿನ ಜೀವನ ಹೇಗಿತ್ತು?

ನಮ್ಮ ಬಗ್ಗೆ ಅಲ್ಲಿ ಮಾತನಾಡುತ್ತಿದ್ದರು. ಕಲಾವಿದರ ಬೆಂಬಲ ಚೆನ್ನಾಗಿ ಸಿಕ್ಕಿತು. ತೆಲುಗಿನ ಮೂರು ಧಾರಾವಾಹಿಗಳಲ್ಲಿಯೂ ಪ್ರಧಾನ ಪಾತ್ರವನ್ನೇ ಮಾಡಿದ್ದೇನೆ. ಸ್ಥಳೀಯ ಪರಿಸರಕ್ಕೆ ಬೇಗ ಹೊಂದಿಕೊಂಡೆ. ಯಾವ ತೊಂದರೆಯೂ ಅನ್ನಿಸಲಿಲ್ಲ.

◆ ನಿಮ್ಮ ಮುಂದಿನ ಹೆಜ್ಜೆ ಗುರುತಿನ ಬಗ್ಗೆ ಏನು ಯೋಚನೆ ಮಾಡಿದ್ದೀರಿ?

ಒಟ್ಟಾರೆ ವೀಕ್ಷಕರು ಬೆಂಬಲಿಸುತ್ತಿದ್ದಾರೆ. ಅವರ ಪ್ರೀತಿ ಮತ್ತೆ ಮತ್ತೆ ತೆರೆಯ ಮೇಲೆ ಕಾಣಿಸಿಕೊಳ್ಳಬೇಕು ಎನ್ನುವ ಆಸೆ ಹುಟ್ಟಿಸಿದೆ. ಸದ್ಯ ಒಂದು ಸಿನಿಮಾದ ಮಾತುಕತೆ ನಡೆದಿದೆ. ಅದಕ್ಕೆ ಯೋಜನೆ ಕೂಡ ಮಾಡಿಕೊಂಡಿದ್ದೇವೆ. ಸಿನಿಮಾ ರೂಪಿಸುವುದು ನಿಶ್ಚಿತ. ಅದಾಗಿಯೇ ನನ್ನನ್ನು ಒಲಿದು ಬಂದಿದೆ. ನಿರ್ದೇಶಕರು ಯಾವುದೇ ಒಂದು ಪಾತ್ರ ನಟನನ್ನು ಆರಿಸಿಕೊಳ್ಳುತ್ತದೆ ಎನ್ನುತ್ತಾರೆ. ಅದು ನಿಜ ಕೂಡ. ಒಬ್ಬ ನಿರ್ದೇಶಕ ಈ ಪಾತ್ರವನ್ನು ಇಂಥವರೇ ಮಾಡಿದರೆ ಸರಿ ಎಂದು ನಿರ್ಧರಿಸುತ್ತಾರೆ. ಎಲ್ಲ ಪಾತ್ರಗಳಿಗೂ ನಾನೇ ಫಿಟ್ ಆಗುವೆ ಎಂದು ಹೇಳಲು ಬರುವುದಿಲ್ಲ. ಹಾಗೆ ಹೇಳಬಾರದು ಕೂಡ. ಅನೇಕ ಕಲಾವಿದರಿದ್ದಾರೆ. ಒಂದೊಂದು ಕಥೆಗೆ ಒಬ್ಬೊಬ್ಬರು ಸೆಟ್ ಆಗ್ತಾರೆ. ಪ್ರತಿಯೊಬ್ಬರಿಗೂ ಅವರದೇಯಾದ ವ್ಯಕ್ತಿತ್ವ ಇರುತ್ತದೆ. ಅವರಿಗೆ ಹೊಂದುವ ಕಥೆ – ಪಾತ್ರವನ್ನು ಮಾಡಿದಾಗ ಅದಕ್ಕೊಂದು ನ್ಯಾಯ ನೀಡಲು ಸಾಧ್ಯ. ನಾನು ಅಂತಹ ವೈವಿಧ್ಯವನ್ನು ನಂಬುತ್ತೇನೆ.

■ ರಾಘವೇಂದ್ರ ಕೆ.